ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ 05 ಇಎಪಿ 2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
ದಿನಾಂಕ: 06.04.2024

**ಸುತ್ತೋಲೆ**

ವಿಷಯ: ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ನಿಗದಿಪಡಿಸಿದ ದಿನಾಂಕದ ನಂತರ (ನಾಲ್ಕನೇ ಹಂತ) ಪರೀಕ್ಷೆ ಪ್ರಾರಂಭವಾಗುವ ಮುಂಚಿನ 3 ದಿನಗಳವರೆಗೆ ಪ್ರತಿ ಡಿಪ್ಲೋಮಾ ಸೆಮಿಸ್ಟರ್ ಗೆ ವಿಶೇಷ ದಂಡ ಶುಲ್ಕ ರೂ.2,000/- ಗಳೊಂದಿಗೆ ಅನ್ವಯವಾಗುವ ಪರೀಕ್ಷಾ ಶುಲ್ಕ ಪಾವತಿಸಿ ನೋಂದಣಿ ಮಾಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 05 ಇಎಪಿ 2023, ದಿ: 29-1-2024.
2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 138 ಡಿಟಿಇ 2023, ದಿ: 06-02-2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಈ ಕಛೇರಿ ಜ್ಞಾಪನದಲ್ಲಿನ ಕಂಡಿಕೆ 1 (ಎಫ್) ರಲ್ಲಿ ದಿನಾಂಕ 5-4-2024 ರಿಂದ ಪರೀಕ್ಷೆ ಪ್ರಾರಂಭವಾಗುವ 15 ದಿನಗಳ ಮೊದಲು ರೂ.2000 (ರೂ. ಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕದೊಡನೆ (ಪ್ರತಿ ಸೆಮಿಸ್ಟರ್ ಗೆ) ಅನ್ವಯವಾಗುವ ಪರೀಕ್ಷಾ ಶುಲ್ಕ ಪಾವತಿಸಿ ಮೇ 2024 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ತಿಳಿಸಲಾಗಿತ್ತು.

ಉಲ್ಲೇಖ (2) ಸರ್ಕಾರದ ತಿದ್ದುಪಡಿ ಆದೇಶದಲ್ಲಿ ಪರೀಕ್ಷಾ ಶುಲ್ಕವನ್ನು ತಡವಾಗಿ ನೊಂದಣಿ ಮಾಡಲು ವಿಶೇಷ ದಂಡ ಶುಲ್ಕ ನಿಗದಿಪಡಿಸಿದ ದಿನಾಂಕದ ನಂತರ (ನಾಲ್ಕನೇ ಹಂತ) ಪರೀಕ್ಷೆ ಪ್ರಾರಂಭವಾಗುವ ಮುಂಚಿನ 3 ದಿನಗಳ ಒಳಗೆ ಪ್ರತಿ ಡಿಪ್ಲೋಮಾ ಸೆಮಿಸ್ಟರ್ ಗೆ ವಿಶೇಷ ದಂಡ ಶುಲ್ಕ ರೂ.2000 (ರೂ.ಎರಡು ಸಾವಿರ ಮಾತ್ರ) ಗಳೊಂದಿಗೆ ಅನ್ವಯವಾಗುವ ಪರೀಕ್ಷಾ ಶುಲ್ಕ ಪಾವತಿಸಿ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಿ ಆದೇಶಿಸಲಾಗಿದೆ.

**ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೇ-2024 ರ ಪರೀಕ್ಷೆಗೆ ಇದುವರೆವಿಗೂ ನೋಂದಾಯಿಸಿಲ್ಲದ ವಿದ್ಯಾರ್ಥಿಗಳು ಪರೀಕ್ಷೆ ಪ್ರಾರಂಭವಾಗುವ ಮುಂಚಿನ 03 ದಿನಗಳ ಒಳಗೆ ಪ್ರತಿ ಸೆಮಿಸ್ಟರ್‌ಗೆ ವಿಶೇಷ ದಂಡ ಶುಲ್ಕ ರೂ. 2000/- (ರೂಪಾಯಿ ಎರಡು ಸಾವಿರಗಳು ಮಾತ್ರ) ಗಳೊಂದಿಗೆ ಅನ್ವಯವಾಗುವ ಪರೀಕ್ಷಾ ಶುಲ್ಕ ಪಾವತಿಸಿ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ. ಅಲ್ಲದೆ, ಡಿಸೆಂಬರ್ 2023 ರ ಪರೀಕ್ಷೆಯ ಮರುಮೌಲ್ಯಮಾಪನ ಫಲಿತಾಂಶ ಪ್ರಕಟವಾಗಿದ್ದು, ಸದರಿ ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ದಿನಾಂಕ: 10.04.2024 ರವರೆಗೆ ಪರೀಕ್ಷಾ ಶುಲ್ಕ ಪಾವತಿಸಲು ಅನುಮತಿ ನೀಡಲಾಗಿದೆ.**

ಮುಂದುವರೆದು, ಉಲ್ಲೇಖ (1) ರ ಜ್ಞಾಪನದನ್ವಯ ದಂಡರಹಿತವಾಗಿ ಮತ್ತು ದಂಡಸಹಿತವಾಗಿ (ನಾಲ್ಕು ಹಂತಗಳಲ್ಲಿ) ಪರೀಕ್ಷಾ ಶುಲ್ಕ ಪಾವತಿಸಿ ಕೆ-2 ಚಲನ್ ಸಹಿತ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಪಟ್ಟಿ ಹಾಗೂ ದಿನಾಂಕ: 04/04/2024 ರವರೆಗೂ ಶುಲ್ಕ ಪಾವತಿಸದ ರೆಗ್ಯೂಲರ್ ವಿದ್ಯಾರ್ಥಿಗಳ ಕೋರ್ಸುವಾರು (ಪರೀಕ್ಷೆಗೆ ನೋಂದಾಯಿಸಿಲ್ಲದ ವಿದ್ಯಾರ್ಥಿಗಳು) ವಿವರಗಳನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಮತ್ತು ಆಂತರಿಕ ಅಂಕಗಳ ಪರಿಶೀಲನೆ ವೇಳೆ ಪರಿವೀಕ್ಷಕರಿಗೆ ನೀಡಿ ಸಹಿ ಪಡೆಯಲು ಸೂಚಿಸಲಾಗಿದೆ.

**ಕಾರ್ಯದರ್ಶಿ**
ತಾಂತ್ರಿಕ ಪರೀಕ್ಷಾ ಮಂಡಳಿ

**ಇವರಿಗೆ:**

ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳಿಗೆ -ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಆಯುಕ್ತರ ಆಪ್ತಶಾಖೆ- ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶಕರು(ಎಸಿಎಂ)
4. ಇ-ಗವರ್ನನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್ಎಸ್/ಇಆರ್ಎಸ್, ಮುಂದಿನ ಕ್ರಮಕ್ಕಾಗಿ.
6. ರಿಜಿಸ್ಟ್ರಾರ್ (ಪರೀಕ್ಷೆ)
7. ಕಾರ್ಯದರ್ಶಿಗಳ ಆಪ್ತಶಾಖೆ.
8. ಉಪ ನಿರ್ದೇಶಕರು (ಪರೀಕ್ಷೆ)
9. ಅಧೀಕ್ಷಕರು ಆರ್ ಡಿ ಎಂ(01) ರಿಂದ (15)
10. ಗಣಕ ಕೇಂದ್ರ-ತಾಂತ್ರಿಕ ಪರೀಕ್ಷಾ ಮಂಡಳಿ, ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
11. ಕಛೇರಿ ಪ್ರತಿ.